# ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಲಿ

6ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು-03.

ಸಂಖ್ಯೆ: KSEAB/DPIE/A8(MIS)/5/2024-23543 ದಿನಾಂಕ:21.03.2024

**ಪರಿಷ್ಕೃತ ಸುತ್ತೋಲೆ**

ವಿಷಯ: ದ್ವಿತೀಯ ಪಿ ಯು ಮತ್ತು ಎಸ್ ಎಸ್ ಎಲ್ ಸಿ ಪರೀಕ್ಷಾ ಕೇಂದ್ರಗಳಲ್ಲಿ ಹೊಸದಾಗಿ ಸಿ ಸಿ ಕ್ಯಾಮರಾಗಳ ಅಳವಡಿಕೆ/ ಈಗಾಗಲೇ ಅಳವಡಿಸಿರುವ ಸಿ ಸಿ ಕ್ಯಾಮರಾಗಳ ದುರಸ್ಥಿಗೆ ಶಾಲಾ ಕಾಲೇಜುಗಳಲ್ಲಿ ಲಭ್ಯವಿರುವ ಅನುದಾನವನ್ನು ಬಳಕೆ ಮಾಡುವ ಕುರಿತು.

ಉಲ್ಲೇಖ: 1 . ಈ ಕಛೇರಿ ಸಮ ಸಂಖ್ಯೆ ಸುತ್ತೋಲೆ ದಿನಾಂಕ:15.02.2024
2. ಮಾನ್ಯ ಪ್ರಧಾನ ಕಾರ್ಯದರ್ಶಿಯವರು ದಿನಾಂಕ: 20.03.2024 ರ V C ಯಲ್ಲಿ ಸೂಚಿಸಿದಂತೆ.

*****

ಮಾರ್ಚ್/ ಏಪ್ರಿಲ್ 2024 ರಲ್ಲಿ ನಡೆಯುವ ಎಸ್.ಎಸ್.ಎಲ್.ಸಿ ಮತ್ತು ದ್ವಿತೀಯ ಪಿ ಯು ಸಿ ಪರೀಕ್ಷಾ ಕೇಂದ್ರದಲ್ಲಿ ಅಳವಡಿಸಿರುವ ಸಿ ಸಿ ಕ್ಯಾಮರಾಗಳು ಸುಸ್ಥಿಯಲ್ಲಿರುವ ಬಗ್ಗೆ ದೃಢಿಪಡಿಕೊಳ್ಳಲು ಎಸ್ ಎಸ್ ಎಲ್ ಸಿ ಪರೀಕ್ಷಾ ಕೇಂದ್ರಗಳಿಗೆ ಸಂಬಂಧಿಸಿದಂತೆ ಆಯಾ ಕ್ಷೇತ್ರ ಶಿಕ್ಷಣಾಧಿಕಾರಿಗಳು ಮತ್ತು ದ್ವಿತೀಯ ಪಿಯುಸಿ ಪರೀಕ್ಷಾ ಕೇಂದ್ರಗಳಿಗೆ ಸಂಬಂಧಿಸಿದಂತೆ ಆಯಾ ಪರೀಕ್ಷಾ ಕೇಂದ್ರದ ಮುಖ್ಯ ಅಧೀಕ್ಷಕರಿಗೆ ಆಯಾ ಜಿಲ್ಲಾ ಉಪನಿರ್ದೇಶಕರುಗಳಿಗೆ ಉಲ್ಲೇಖ-1 ರ ಸುತ್ತೋಲೆಯ ಮೂಲಕ ಸೂಚಿಸಲಾಗಿರುತ್ತದೆ.

ಈ ಸಂಬಂಧ ಎಸ್ ಎಸ್ ಎಲ್ ಸಿ ಮತ್ತು ದ್ವಿತೀಯ ಪಿ ಯು ಸಿ ಪರೀಕ್ಷಾ ಕೇಂದ್ರಗಳ ಸಿ ಸಿ ಕ್ಯಾಮರಾಗಳಿಗೆ ಸಂಬಂಧಿಸಿದಂತೆ , ಉಲ್ಲೇಖ-2ರಲ್ಲಿ ಮಾನ್ಯರು ಹೊಸದಾಗಿ ಸಿ ಸಿ ಕ್ಯಾಮರಾಗಳನ್ನು ಅಳವಡಿಸಲು ಹಾಗೂ ಈಗಾಗಲೇ ಅಳವಡಿಸಿರುವ ಸಿ ಸಿ ಕ್ಯಾಮರಾಗಳು ರಿಪೇರಿಯಾಗಿದಲ್ಲಿ ಕ್ಯಾಮರಾಗಳ ದುರಸ್ಥಿ ಕಾರ್ಯ ಕೈಗೊಳ್ಳಲು ಈ ಮೂಲಕ ಸೂಚಿಸಿದ್ದು. ಸದರಿ ಕ್ಯಾಮರಾಗಳಿಗೆ ಸಂಬಂಧಿಸಿದಂತೆ ಹೊಸದಾಗಿ ಖರೀದಿಸಲು/ ದುರಸ್ಥಿ ಮಾಡಿಸಲು ತಗಲುವ ವೆಚ್ಚವನ್ನು ಶಾಲಾ ಮತ್ತು ಕಾಲೇಜುಗಳಲ್ಲಿ ಲಭ್ಯವಿರುವ ಸಂಚಿತ ನಿಧಿಯ ಅನುದಾನದಿಂದ ಭರಿಸಲು ಆದೇಶಿಸಿದೆ. ಸದರಿ ಖರ್ಚಿಗೆ ಸಂಬಂಧಿಸಿದಂತೆ ಕೆ.ಟಿ.ಪಿ.ಪಿ ನಿಯಮಾನುಸಾರ ಕ್ರಮವಹಿಸುವುದು ಹಾಗು ಲೆಕ್ಕ ತಪಾಸಣೆಯ ಸಮಯದಲ್ಲಿ ಸೂಕ್ತ ದಾಖಲಾತಿಗಳನ್ನು ಹಾಜರಿಪಡಿಸುವುದು.

Manjushree

ಎನ್.ಮಂಜುಶ್ರೀ., ಭಾ.ಆ.ಸೇ
ಅಧ್ಯಕ್ಷರು
ಕ.ಶಾ.ಪ.ಮೌ.ನಿ ಮಂಡಲಿ

21/3/24

**ಕ್ರಮಕ್ಕಾಗಿ,**

1. ರಾಜ್ಯದ ಎಲ್ಲಾ ಜಿಲ್ಲೆಗಳ ಜಿಲ್ಲಾ ಉಪನಿರ್ದೇಶಕರು, ಪದವಿ ಪೂರ್ವ, ಶಾಲಾ ಶಿಕ್ಷಣ ಇಲಾಖೆ.
2. ರಾಜ್ಯದ ಎಲ್ಲಾ ಜಿಲ್ಲೆಗಳ ಜಿಲ್ಲಾ ಉಪನಿರ್ದೇಶಕರು(ಆಡಳಿತ), ಶಾಲಾ ಶಿಕ್ಷಣ ಇಲಾಖೆ.

**ಪ್ರತಿಗಳು:**

1. ಮಾನ್ಯ ಅಧ್ಯಕ್ಷರ ಆಪ್ತಶಾಖೆ, ಕ.ಶಾ.ಪ.ಮೌ.ಮಂಡಲಿ.
2. ಲೆಕ್ಕಾಧಿಕಾರಿಗಳು, ಕ.ಶಾ.ಪ.ಮೌ.ಮಂಡಲಿ.